"ಶಿವಾನಿಯನ್ನು ಒಂದು ಸಲ ಭೇಟಿಯಾಗಿ, ಅವಳ ಅಭಿಪ್ರಾಯ ತಿಳಿದುಕೋ, ರಚನಾ ಅಕ್ಕ ಭಾವಂಗೆ ನಾನು ಏನಾದರೂ ಕಾರಣ ಹೇಳ್ತೀನಿ. ರಚನಾ ಏನಂತಾಳೆ? ಅವಳಿಗೆ ಈ ವಿಷಯ ಹೇಳಿದ್ದೀಯಾ?"

"ರಚನಾ ಒಂದು ತಿಂಗಳ ತರಬೇತಿಗೇಂತ ಜಪಾನ್‌ಗೆ ಹೋಗಿದ್ದಾಳೆ."

"ಒಳ್ಳೆಯದಾಯಿತು. ಅವಳ ಅಕ್ಕಭಾವಂಗೆ ರಚನಾ ವಾಪಸ್ಸು ಬಂದಮೇಲೆ ಮಾತಾಡೋಣಾಂತ ಹೇಳು."

"ಶಿವಾನೀನ ನಾನು ಯಾವಾಗ ಭೇಟಿ ಮಾಡಲಿ?"

"ಹದಿನೈದು ದಿನ ಕಳೆಯಲಿ. ಬಾಲೂನ್ನ ಕೇಳಿ ಶಿವಾನಿ ಹೇಗಿದ್ದಾಳೇಂತ ವಿಚಾರಿಸು. ಅವಳ ಮೂಡ್ ನೋಡಿಕೊಂಡು ಭೇಟಿಯಾಗು."

ಅಕ್ಕನ ಜೊತೆ ಮಾತಾಡಿದ ಮೇಲೆ ಅವನು ಕೊಂಚ ನಿರಾಳನಾದ.

★★★

ಒಂದು ವಾರ ಕಳೆಯಿತು. ಸೂರ್ಯನಿಗೆ ಏನೋ ಆತಂಕ. ಶಿವಾನಿ ಹೇಗಿದ್ದಾಳೋ ಏನೋ? ಗಂಡನನ್ನು ಉಳಿಸಿಕೊಳ್ಳಲು ಕಂಡಕಂಡ ದೇವರ ಮೊರೆ ಹೋಗಿದ್ದಳಲ್ಲವೆ? ಅವರಿಬ್ಬರೂ ಪರಸ್ಪರ ಎಷ್ಟು ಪ್ರೀತಿಸುತ್ತಿದ್ದರೆಂದು ನನಗೆ ಗೊತ್ತು. ಅಂತಹ ಹುಡುಗಿಯ ಮುಂದೆ ಇಷ್ಟು ಬೇಗ ಮದುವೆಯ ಪ್ರಸ್ತಾಪ ಮಾಡುವುದೆ? ಒಂದು ವರ್ಷದವರೆಗೂ ಈ ವಿಷಯ ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ. ರಚನಾಗೆ ಏನು ಹೇಳಲಿ?' ಅವನ ತಲೆ ಯೋಚನೆಗಳ ಕಾರ್ಖಾನೆಯಾಯಿತು.

ಸೂರ್ಯ ಹದಿನೈದು ದಿನ ಕಳೆದ ಮೇಲೆ ಬಾಲುವಿಗೆ ಫೋನ್ ಮಾಡಿ, "ಶಿವಾನಿಯನ್ನು ಯಾವಾಗ ಭೇಟಿಯಾಗಬಹುದು? ಅವಳು ಎಲ್ಲಿದ್ದಾಳೆ? ಅವಳ ಮನಃಸ್ಥಿತಿ ಹೇಗಿದೆ?" ಎಂದು ಕೇಳಿದ.

"ನೀನು ಯಾವಾಗ ಭೇಟಿ ಮಾಡಬೇಕೂಂತಿದ್ದೀಯಾ?"

"ಒಂದು ವರ್ಷದವರೆಗೂ ಕಾಯೋಣಾಂತಿದ್ದೇನೆ. ಆದರೆ ರಚನಾಗೆ ಏನು ಹೇಳಬೇಕೂಂತ ಗೊತ್ತಾಗ್ತಿಲ್ಲ..."

"ಶಿವಾನಿ ಕೂಡ ನಿನ್ನನ್ನು ಭೇಟಿಯಾಗಬೇಕೂಂತಿದ್ದಳು. ನೀನು ಸೋಮವಾರ ರಜ ಹಾಕಿ ಬಾ. ನಾನು ಅವಳಿಗೆ ಮನೆಯಲ್ಲಿರುವಂತೆ ಹೇಳ್ತೀನಿ."

"ಥ್ಯಾಂಕ್ಸ್ ಕಣೋ..."

"ಆದ್ರೆ ಒಂದು ಕಂಡಿಷನ್. ನೀನು ಬರುವ ವಿಚಾರ ಸುಮೇರು ಮನೆಯವರಿಗೆ ಗೊತ್ತಾಗಬಾರದು. ನೀನು ಶಿವಾನಿಯನ್ನು ಭೇಟಿ ಮಾಡಿದ ನಂತರ ಅವರ ಮನೆಗೆ ಹೋಗೋದೋ ಬೇಡವೋ ನಿರ್ಧರಿಸೋಣ."

"ಆಯ್ತಪ್ಪ."

"ನೀನು ಬಸ್‌ನಲ್ಲಿ ಬಾ. ನೀನೂ ಫೋನ್ ಮಾಡಿದ ತಕ್ಷಣ ನಾನು ನನ್ನ ಫ್ರೆಂಡ್ ಕಾರು ತರ್ತೀನಿ. ಎಲ್ಲಾದ್ರೂ ತಿಂಡಿ ತಿನ್ನೋಣ"

ಸೂರ್ಯ ಒಪ್ಪಿಕೊಂಡ. ಆ ರಾತ್ರಿ ಪೂರ್ತಿ ಅವನಿಗೆ ನಿದ್ರೆ ಬರಲಿಲ್ಲ. ಶಿವಾನಿ ಹೇಗಿರುತ್ತಾಳೋ ಏನೋ? ವಿಷಯ ಹೇಗೆ ಪ್ರಸ್ತಾಪಿಸುವುದು? ಅವಳೇ ಆ ವಿಷಯ ಪ್ರಸ್ತಾಪಿಸಲಾರಳು. ಅವಳ ತಾಯಿತಂದೆ ಮಾತಾಡಬಹುದು. ಅವರು ಮಾತಾಡಿದರೆ ಒಳ್ಳೆಯದು. ಅಲಂಕಾರ ಪ್ರಿಯೆ